2	ಕೊಲ್ಲೂರು	–	–	–	–	1	2	8	14
3	ಗಂಗೂಳ್ಳಿ	–	–	–	–	1	3	7	19
4	ಕುಂದಾಪುರ	–	1	1	–	1	2	9	30

ಇ) ಇದುವರೆಗೆ ಅಂತಹ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ಮೇಟ್ರೋ ರೈಲ್ವೆ ಕಾಮಗಾರಿಗಳು

443(304) ಶ್ರೀ ಗೋಪಾಲಯ್ಯ ಕೆ (ಮಹಾಲಕ್ಷ್ಮೀ ಲೇಔಟ್)

ಅ) ಬೆಂಗಳೂರು ಮೆಟ್ರೋ ರೈಲ್ವೆ ಯೋಜನೆಯ ಕಾಮಗಾರಿಗಳ ಇತ್ತೀಚಿನ ಪ್ರಗತಿಯೇನು (ವಿವರ ನೀಡುವುದು)

ಆ) ಯಾವ ಯಾವ ಹಂತದ ಯೋಜನೆಗಳು 2014 ರೊಳಗೆ ಪೂರ್ಣಗೊಳ್ಳುತ್ತವೆ.

ಇ) ಈ ಯೋಜನೆಗಾಗಿ ಇಲ್ಲಿಯವರೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವೆಚ್ಚಮಾಡಿರುವ ಹಣವೆಷ್ಟು;

ಈ) ಈ ಯೋಜನೆಗಾಗಿ ಬ್ಯಾಂಕ್‌ಗಳು ಹಾಗೂ ಇತರೆ ಹಣಕಾಸಿನ ಸಂಸ್ಥಗಳಿಂದ ಪಡೆದ ಸಾಲವೆಷ್ಟು?

ಉ) ಈ ಯೋಜನೆಯ ಕಾಮಗಾರಿಗಳು ವಿಳಂಭವಾಗಿರಲು ಕಾರಣಗಳೇನು? ಇದರಿಂದಾಗುವ ನಷ್ಟವೆಷ್ಟು;

ಊ) ಈ ಯೋಜನೆಯನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಲು ಕೈಗೊಂಡ ಕ್ರಮಗಳೇನು?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯ ಮಂತ್ರಿಯವರು)

ಅ) ವಿವಿಧ ರೀಚ್‌ಗಳ ಹಂತ –1 ರ ಭೌತಿಕ ಪ್ರಗತಿಯ ವಿವರಗಳು ಡಿಸೆಂಬರ್ 2013 ಕೊನೆಯಲ್ಲಿದ್ದಂತೆ ಕೆಳಗಿನಂತಿವೆ.

ಕ್ರಮ ಸಂಖ್ಯೆ	ರೀಚ್	ಭೌತಿಕ ಪ್ರಗತಿ /ಶೇಕಡ		ಕಾಮಗಾರಿ ಪೂರ್ಣಗೊಳಿಸಿ ಸಂಚಾರಕ್ಕೆ ಮುಕ್ತವಾಗುವ ನಿರೀಕ್ಷಿತ ತಿಂಗಳು
		ವಯಾಡಕ್ಟ್	ನಿಲ್ದಾಣಗಳು	
1	ರೀಚ್–2	100%	77%	ಡಿಸೆಂಬರ್ 2014
2	ರೀಚ್–3	100%	95%	ಫೆಬ್ರವರಿ 2014
3	ರೀಚ್–3ಎ	100%	95%	ಫೆಬ್ರವರಿ 2014
4	ರೀಚ್–3ಬಿ	99.79%	66%	ಆಗಸ್ಟ್ 2014
5	ರೀಚ್–4	100%	90%	ಮಾರ್ಚ್ 2015
6	ರೀಚ್–4ಎ	100%	65%	ಮಾರ್ಚ್ 2015
7	ಯುಜಿ–(ಪೂರ್ವ ಪಶ್ಚಿಮ)	89%		ಡಿಸೆಂಬರ್ 2014
8	ಯುಜಿ– (ಉತ್ತರ–ದಕ್ಷಿಣ)	45%		ಮಾರ್ಚ್ 2015
9	ಮೆಜೆಸ್ಟಿಕ್ ಸ್ಟೇಷನ್ (ಯುಜಿ)	41%		ಮಾರ್ಚ್ 2015

ಬೆಂಗಳೂರು ಮೆಟ್ರೋ ಯೋಜನೆಯ ಹಂತ –1 ರ ಕಾಮಗಾರಿಗಳು ಮಾರ್ಚ್ 2015 ರೋಳಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ಆ) ರೀಚ್ –2, ರೀಚ್ –3, ರೀಚ್–3ಎ, ರೀಚ್ –3ಬಿ ಯುಜಿ (ಪೂರ್ವ–ಪಶ್ಚಿಮ), ಯೋಜನೆಗಳು 2014 ರೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

ಇ) ಈ ಯೋಜನೆಗಾಗಿ ಡಿಸೆಂಬರ್, 2013 ರವರೆಗೂ ವೆಚ್ಚ ಮಾಡಿರುವ ಹಣ ರೂ 10372.55ಕೋಟಿಗಳು.

ಈ) ಡಿಸೆಂಬರ್ 2013 ರ ಕೊನೆಯಲ್ಲಿದಂತೆ ಬ್ಯಾಂಕ್‌ಗಳು ಹಾಗೂ ಇತರೆ ಹಣಕಾಸಿನ ಸಂಸ್ಥೆಗಳಿಂದ ಪಡೆದ ಹಣ:

ವಿವರ	ಪಡೆದ ಹಣ
ಜೈಕಾ	2238.32
ಎ.ಎಫ್.ಡಿ	355.78
ಕೆಯುಐಡಿಎಫ್‌ಸಿ	14.75
ಹುಡ್ಕೋ	650.00
ಬ್ಯಾಂಕ್ ಆಫ್ ಮಹಾರಾಷ್ಟ್ರ	150.00
ವಿಜಯಾ ಬ್ಯಾಂಕ್	50.00
ಬ್ಯಾಂಕ್ ಆಫ್ ಇಂಡಿಯಾ	50.00

ಉ) ಅನುಷ್ಠಾನದಲ್ಲಿನ ವಿಳಂಬಕ್ಕೆ ಕಾರಣಗಳು ಕೆಳಗಿನಂತಿವೆ.

ಅ) ಭೂಸ್ವಾಧೀನಕ್ಕೆ ಸಂಬಂಧಿಸಿದ ವಿವಾದಗಳು, ಸುದೀರ್ಘವಾದ ನ್ಯಾಯಾಲಯದ ಪ್ರಕರಣಗಳಾಗಿ ಪರಣಮಿಸಿದ್ದರಿಂದ ಆದ ವಿಳಂಭ.

ಆ) ರೈಲ್ವೆ ಇಲಾಖೆಯಿಂದ ಭೂಮಿ ವರ್ಗಾವಣೆಯಲ್ಲಿ ಸುಮಾರು 2 ವರ್ಷಗಳ ವಿಳಂಭ.

ಇ) ಸುರಂಗ ಮಾರ್ಗ 1 ಮತು ಮೆಜೆಸ್ಟಿಕ್ ನಿಲ್ದಾಣ ಇವುಗಳ ಟೆಂಡರ್‌ಗಳ ವಿಭಜನೆ ಮತ್ತು ಮರು ಟೆಂಡರ್ ಇವುಗಳಿಂದ ಸುಮಾರು 1 ವರ್ಷಕಾಲ ವಿಳಂಭ

ಈ) ಯುಟಿಲಿಟಿಗಳ ಸ್ಥಳಾಂತರಕ್ಕೆ ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಕಾಲಾವಾಕಾಶ ಬೇಕಾದ್ದರಿಂದ ಬಿಎಂಆರ್‌ಸಿಎಲ್ ವ್ಯಾಪ್ತಿಯನ್ನು ಮೀರಿದ ಕಾರಣಗಳಿಂದಾಗಿ ಅನುಷ್ಠಾನದಲ್ಲಿ ವಿಳಂಭವಾದುದರಿಂದ ಹಾಗೂ ಹಂತ–1 ಇನ್ನೂ ಪೂರ್ಣವಾಗದಿರುವುದರಿಂದ ಸಂಸ್ಥೆಗೆ/ರಾಜ್ಯ ಸರ್ಕಾರಕ್ಕೆ ಆದ ನಷ್ಟವನ್ನು ಲೆಕ್ಕ ಮಾಡಿರುವುದಿಲ್ಲ.

ಊ) ಈ ಯೋಜನೆ ಹಂತ 1 ಡಿಸೆಂಬರ್ 2013 ರೊಳಗೆ ಮುಕ್ತಾಯವಾಗಬೇಕಿತ್ತು ಮೇಲೆ ತಿಳಿಸಿದ ಕಾರಣಗಳಿಂದ ವಿಳಂಭ ವಾದುದರಿಂದ ಆದಷ್ಟು ಬೇಗ ಪೂರ್ಣಗೊಳಿಸಲು ಈ ಕೆಳಕಂಡ ಮಾರ್ಗಗಳನ್ನು ಹಮ್ಮಿಕೊಳ್ಳಲಾಗಿದೆ.

1. ಎಲ್ಲಾ ಮುಖ್ಯ ಕಾಮಗಾರಿಗಳನ್ನು ಈಗಾಗಲೇ ಅವಾರ್ಡ್ ಮಾಡಲಾಗಿದೆ. (ಒಂದು ಚಿಕ್ಕ ಕೆಲಸದ ಒಪ್ಪಂದವನ್ನು ಮಾಡಬೇಕಾಗಿರುತ್ತದೆ.
2. ನಿಯತಕಾಲಿಕವಾಗಿ ಪರಿಶೀಲನಾ ಸಭೆಗಳನ್ನು ಕರೆದು ಕೆಲಸಗಳನ್ನು ದಿನನಿತ್ಯ ಮಾನಿಟರ್ ಮಾಡಲಾಗುತ್ತಿದೆ.
3. ಗುತ್ತಿಗೆದಾರರಿಗೆ ಅವರ ಬಿಲ್ಲುಗಳನ್ನು ನಿಯಮಿತವಾಗಿ ನೀಡಲಾಗುತ್ತಿದೆ.

4. ಗುತ್ತಿಗೆದಾರರಿಗೆ ಮೊಬಿಲೈಸೇಷನ್‌ಗಾಗಿ ಮುಂಗಡ ನೀಡುತ್ತಿದ್ದು ಅದರ ಜೊತೆಯಲಿ ಸಾಮಗ್ರಿಗಳು ಮತ್ತು ಯಂತ್ರೋಪಕರಣಗಳಿಗಾಗಿ ಮುಂಗಡ ನೀಡಲಾಗುತ್ತಿದೆ.

ಪೌರ ಕಾರ್ಮಿಕರ ನೇಮಕ

446(307) ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮೀ ಲೇಔಟ್)

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರ ಸಂಖ್ಯೆ ಎಷ್ಟು;

ಆ) ಐ.ಪಿ:ಡಿ. ಸಾಲಪ್ಪ ವರದಿ ಪ್ರಕಾರ ಎಷ್ಟು ಜನರನ್ನು ಜನಸಂಖ್ಯೆ ಆಧಾರದ ಮೇಲೆ ನೇಮಕಾತಿ ಮಾಡಕೊಳ್ಳಬೇಕು;

ಇ) ಹೊಸದಾಗಿ ಪೌರಕಾರ್ಮಿಕರನ್ನು ನೇಮಕಾತಿ ಮಾಡಿಕೊಳ್ಳಲು ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ಈ ಪೌರಕಾರ್ಮಿಕರನ್ನು ಹೊರಗುತ್ತಿಗೆ ಅಥವಾ ನೇರ ನೇಮಕಾತಿ ಮಾಡಿಕೊಳ್ಳಲಾಗುವುದೇ

ಉ) ಕಾರ್ಮಿಕರನ್ನು ನೇಮಕ ಮಾಡುವಾಗ ಅನುಸರಿಸುವ ಮಾನದಂಡವೇನು ಇವರಿಗೆ ನೀಡುವ ವೇತನವೆಷ್ಟು?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಯವರು)

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು ಸಂಖ್ಯೆ 2700